ಶ್ರೀ ಬಿ.ಎ. ಮೊಯಿದ್ದೀನ್ :— ಮಾನ್ಯ ಅಧ್ಯಕ್ಷರೇ ಈಗಾಗಲೇ ನಾನು ಕೆಲವು ಅಂಕಿ ಅಂಶಗಳನ್ನು ಹಿಂದಿನ ಪ್ರಶ್ನೆಗೆ ಉತ್ತರಿಸುವಾಗ ಕೊಟ್ಟಿದ್ದೇನೆ. ನಿಮ್ಮ ಕಾಲೇಜಿನ ಪೊಸಿಷನ್ ಅಷ್ಟು ಕೆಟ್ಟದಾಗಿಲ್ಲ. ಈ 28 ಕಾಲೇಜುಗಳಿಗೆ ಭೂಮಿಯೂ ಇಲ್ಲ. ಕಟ್ಟಡವೂ ಇಲ್ಲ, ಆತರಹದ ಸ್ಥಿತಿಯಲ್ಲಿ ಅವುಗಳು ಇವೆ.

ಶ್ರೀ ಯು.ಆರ್. ಸಭಾಪತಿ :— ನಾವು ಕಾಲೇಜಿಗಾಗಿ ದೇವಸ್ಥಾನದಿಂದ 4 ಎಕರೆ ಜಮೀನನ್ನು ಬಿಟ್ಟು ಕೊಟ್ಟಿದ್ದೇವೆ. ನಮ್ಮ ಕಾಲೇಜಿನ ಪರಿಸ್ಥಿತಿ ಕೆಟ್ಟದಾಗಿಲ್ಲ ಎಂದರೆ ಹೇಗೆ?

ಶ್ರೀ ಬಿ.ಎ. ಮೊಯಿದ್ದೀನ್ :— ಈ ಸಲವೂ ನಾನು ಆ ಕಾಲೇಜಿಗೆ ಸ್ವಲ್ಪ ಹಣವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇದರ ಜೊತೆಗೆ ನಿಮ್ಮ ಇಬ್ಬರೂ ಎಂ.ಪಿಗಳೂ ಸ್ವಲ್ಪ ಹಣ ಕೊಟ್ಟರೆ ನಿಜವಾಗಿಯೂ ಕೂಡ ಸುಂದರವಾದಂತಹ ಕಟ್ಟಡವನ್ನು ನಾವು ಕಾಪುವಿನಲ್ಲಿ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಎನ್‌ಜಿಒಗಳಿಂದಲೂ ಕೂಡ ಹಣ ಸಂಗ್ರಹಣೆ ಮಾಡಿ ಏನಾದರೂ ಒಂದು ಮಾದರಿಯನ್ನಾಗಿ ಮಾಡೋಣ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ 5 ಲಕ್ಷ ರೂ.ಗಳಾದರೆ ನಾವು ಎಂಎಲ್‌ಎ ಅಥವಾ ಎಂಪಿ ಫಂಡ್‌ನಿಂದ ಕ್ರೋಢೀಕರಿಸಬಹುದು. ಆದರೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಕ್ರೋಢೀಕರಿಸಲು ಹೇಗೆ ಸಾಧ್ಯ? ಇದರ ಬಗ್ಗೆ ನಾವು ಸತತವಾಗಿ ಕಳೆದ ಐದು ವರ್ಷಗಳಿಂದ ಮುಖ್ಯ ಇಂಜಿನಿಯರ್‌ರವರ ಹತ್ತಿರ, ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಹೋಗಿ ತಿರುಗುತ್ತಿದ್ದರೂ ಹಣ ಬಿಡುಗಡೆಯಾಗದೇ ಕಟ್ಟಡ ಇನ್ನೂ ಆಗಿಲ್ಲ.

ಶ್ರೀ ಬಿ.ಎ. ಮೊಯಿದ್ದೀನ್ :— ಇದಕ್ಕಾಗಿ ಬಜೆಟ್‌ನಲ್ಲಿ ಈ ವರ್ಷ 50 ಲಕ್ಷ ರೂ.ಗಳನ್ನು ಮಾತ್ರ ಮೀಸಲಾಗಿರಿಸಲಾಗಿದೆ, ಈ ಹಣದಲ್ಲಿ ನಾನು ಯಾವ್ಯಾವುದಕ್ಕೆ ಹಣ ಒದಗಿಸಲು ಸಾಧ್ಯ? ನಾನು ನನ್ನ ಅಸಹಾಯಕತೆಯನ್ನು ನಿಮ್ಮ ಮುಂದಿಟ್ಟಿದ್ದೇನೆ.

ಅಧ್ಯಕ್ಷರು :— ಆಯಿತು, ಮುಂದಿನ ಪ್ರಶ್ನೆಗೆ ಹೋಗೋಣ.

ವೃತ್ತಿ ಶಿಕ್ಷಣ ನಿರ್ದೇಶನಾಲಯದಲ್ಲಿ ಕೆಲಸ ಮಾಡಿದ ಅಧ್ಯಾಪಕರುಗಳನ್ನು ಖಾಯಂಗೊಳಿಸುವುದು.

161(1177) ಶ್ರೀ ಮತಿ ಕೆ.ಆರ್. ಪ್ರಭಾವತಿ(ಮಂಡ್ಯ) :— ಮಾನ್ಯ ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವೃತ್ತಿ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ ಕಳೆದ 10 ರಿಂದ 14 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಅಧ್ಯಾಪಕರು ಹಾಗು ಅಧ್ಯಾಪಕೇತರ ನೌಕರರುಗಳ ಒಟ್ಟು ಸಂಖ್ಯೆ ಎಷ್ಟು?

ಅ) ಅವರುಗಳಲ್ಲಿ ಎಷ್ಟು ಮಂದಿ ಖಾಯಂ ನೌಕರರುಗಳಿದ್ದಾರೆ. (ಪ್ರತೇಕವಾಗಿ ವಿವರ ಒದಗಿಸುವುದು)

ಇ) ಖಾಯಂ ಆಗಿಲ್ಲದ ನೌಕರರುಗಳನ್ನು ಖಾಯಂಗೊಳಿಸಲು ಸರ್ಕಾರವು ಕ್ರಮವನ್ನೇನಾದರೂ ಕೈಗೊಂಡಿದೆಯೇ?

ಈ) ಈಗಾಗಲೇ ವೃತ್ತಿ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ 13 ಕೋರ್ಸ್‌ಗಳನ್ನು ಮುಚ್ಚಲು ಆದೇಶಿಸಿರುವುದರಿಂದ ಅಲ್ಲಿನ ನೌಕರರುಗಳ ಭವಿಷ್ಯದ ಬಗ್ಗೆ ಸರ್ಕಾರವು ತೇಗೆದುಕೊಳ್ಳಲಿರುವ ಕ್ರಮವೇನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು) :—

ಅ)	ಅಧ್ಯಾಪಕರು	ಅಧ್ಯಾಪಕೇತರರು	ಒಟ್ಟು
	364	36	400
	115	28	143

ಆ) ವೃತ್ತಿ ಶಿಕ್ಷಣ ಕೋರ್ಸ್‌ಗಳ ಬೋಧನೆಯು ಒಂದು ತಾತ್ಕಾಲಿಕ ಯೋಜನೆಯಾಗಿದ್ದು, ಯಾವುದೇ ಮಂಜೂರಾದ ಹುದ್ದೆಗಳಿರುವುದಿಲ್ಲ. ಈ ಕೋರ್ಸ್‌ಗಳ ಅಗತ್ಯತೆಗೆ ಅನುಗುಣವಾಗಿ ಮುಂದುವರೆಸುವುದು ಅಥವಾ ರದ್ದುಗೊಳಿಸುವ ಬಗ್ಗೆ ನಿರ್ಧರಿಸಲಾಗುತ್ತಿದೆ. ಈ ತಾತ್ಕಾಲಿಕ ಸ್ವರೂಪದ ನೇಮಕಾತಿಗಳನ್ನು ಸಕ್ರಮಗೊಳಿಸಿದಲ್ಲಿ, ಅದೇ ರೀತಿಯಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡ ಹಲವಾರು ಇಲಾಖೆಗಳಲ್ಲಿನ ಸಿಬ್ಬಂದಿಯನ್ನು ಸಕ್ರಮಗೊಳಿಸುವ ಅನಿವಾರ್ಯತೆ ಉಂಟಾಗುತ್ತದೆ. ನ್ಯಾಯಾಲಯಗಳು ನಿಗದಿತ ಪದ್ಧತಿ ಮೀಸಲಾತಿ ನಿಯಮ ಇತ್ಯಾದಿಗಳ ಪಾಲಿಸದೇ ಮಾಡಿಕೊಂಡ ನೇಮಕಾತಿಗಳು ನಿಯಮಬಾಹಿರವೆಂದು ಇತ್ತೀಚಿನ ತೀರ್ಪುಗಳಲ್ಲಿ ತಿಳಿಸಿವೆ. ದಿ:1-7-1984ರ ನಂತರ ನೇಮಕಗೊಂಡ ಸಿಬ್ಬಂದಿಯನ್ನು ಸಕ್ರಮಗೊಳಿಸಲು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವಿದೆ. ಈ ಹಿನ್ನಲೆಯಲ್ಲಿ ಈ ಅರೆಕಾಲಿಕ ಸಿಬ್ಬಂದಿಯನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲವೆಂದು ಸರ್ಕಾರ ತೀರ್ಮಾನಿಸಿದೆ. ಅದಾಗ್ಯೂ ಇವರುಗಳಿಗೆ ಪಾವತಿಸುತ್ತಿರುವ ಸಂಭಾವನೆಯು ಕಡಿಮೆಯೆಂದು ಪರಿಗಣಿಸಿ ಇದನ್ನು ದ್ವಿಗುಣಗೊಳಿಸಲಾಗಿದೆ.

ಈ)ಸೇವೆಯಲ್ಲಿ ಸಕ್ರಮಗೊಂಡಿರುವ ಸಿಬ್ಬಂದಿಯನ್ನು ಬೇರೆ ಶಿಕ್ಷಣ ಸಂಸ್ಥೆಗಳಿಗೆ ಸ್ಥಳಾಂತರಿಸಲು ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.

ಶ್ರೀಮತಿ ಕೆ.ಆರ್. ಪ್ರಭಾವತಿ :— ಮಾನ್ಯ ಅಧ್ಯಕ್ಷರೇ ಈಗಾಗಲೇ ಈ ಇಲಾಖೆಯಲ್ಲಿ 400 ಜನ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ 143 ಜನ ಮಾತ್ರ ಖಾಯಂ ಆಗಿದ್ದಾರೆ. ಉಳಿದವರಿಗೆ ಯಾವಾಗ ಸರ್ಕಾರ ಖಾಯಮ್ಮಾತಿ ಮಾಡುತ್ತದೆ? ಎಂದು ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಖಾಯಂ ಅಲ್ಲದಿದ್ದ ನೌಕರರುಗಳನ್ನು ಖಾಯಂಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಪ್ರಶ್ನೆಗೆ 1.7.84ರ ನಂತರ ನೇಮಕಗೊಂಡ ಸಿಬ್ಬಂದಿಯ ಸಕ್ರಮಾತಿಗೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳಿಲ್ಲದೆ ಹಿನ್ನಲೆಯಲ್ಲಿ ಈ ಸಿಬ್ಬಂದಿಯನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲವೆಂದು ಸರ್ಕಾರ ತೀರ್ಮಾನಿಸಿದೆ ಎಂದು ಹೇಳಿದ್ದಾರೆ. ಆದರೆ ಹಿಂದೆ 1996ರಲ್ಲಿ ಸನ್ಮಾನ್ಯ ಗೋವಿಂದೇಗೌಡರು ಇದೇ ವಿಧಾನ ಸಭೆಯಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದಾರೆ. ಅದರಲ್ಲಿ ಏಳು ವರ್ಷ ಸೇವೆ ಸಲ್ಲಿಸಿದ ಎಲ್ಲಾ ನೌಕರರುಗಳನ್ನು ಖಾಯಂಗೊಳಿಸಲು ಸರ್ಕಾರ ಕ್ರಮಕೈಗೊಳ್ಳುತ್ತಿದ್ದೇವೆ ಎಂದು ತಿಳಿಸಲಾಗಿದೆ. ನಂತರ ಮಾನ್ಯ ಸಚಿವರಾದ ಕೃಷ್ಣಪ್ಪನವರು ವಿಧಾನ ಪರಿಷತ್ತಿನಲ್ಲಿ ಹಾಗೂ ವಿಧಾನ ಸಭೆಯಲ್ಲಿ ನೀಡಲಾದ ತಮ್ಮ ಉತ್ತರಗಳಲ್ಲಿ ವೃತ್ತಿ ಶಿಕ್ಷಣ ಕೋರ್ಸ್ ನೀಡುವ ಬೋಧಕ-ಬೋಧಕೇತರರು ತಮ್ಮ ಸೇವೆಯನ್ನು ಸಕ್ರಮಗೊಳಿಸಲು ಒತ್ತಾಯಿಸಿ ದೀರ್ಘಕಾಲ ಉಪವಾಸ ಸತ್ಯಾಗ್ರಹ ನಡೆಸಲಾಗಿರುವ ಹಿನ್ನಲೆಯಲ್ಲಿ ದಿನಾಂಕ 28.7.96ರಂದು ಮಾನ್ಯ ಶಿಕ್ಷಣ ಸಚಿವರ ಸಮ್ಮುಖದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಿದಂತೆ ಹಾಗೂ ಮಾನ್ಯ ಶಿಕ್ಷಣ ಸಚಿವರು ವಿಧಾನ ಸಭೆಯಲ್ಲಿ ದಿನಾಂಕ: 1.7.95ಕ್ಕೆ ಏಳು ವರ್ಷ ನಿರಂತರವಾಗಿ ಪೂರ್ಣ ಕಾರ್ಯಭಾರ ಹೊಂದಿ ಕಾರ್ಯನಿರ್ವಹಿಸುತ್ತಾ ಇದ್ದ ಸಿಬ್ಬಂದಿ ವರ್ಗದವರ ಸೇವೆಯನ್ನು ಸಕ್ರಮಗೊಳಿಸಲಾಗುವುದು ಎಂಬ ಭರವಸೆ ನೀಡಿದ ಹಿನ್ನಲೆಯಲ್ಲಿ ದಿನಾಂಕ: 1.7.96ಕ್ಕೆ ಹಾಗೂ ದಿನಾಂಕ:1.7.96ಕ್ಕೆ ಏಳು ವರ್ಷ ಸೇವೆ ಸಲ್ಲಿಸಿದ ಒಟ್ಟು 343 ಸಿಬ್ಬಂದಿ ವರ್ಗದವರ ಪ್ರಸ್ತಾವನೆಯನ್ನು ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ಪಡೆದು ಇವರುಗಳನ್ನು ಸೇವೆಯಲ್ಲಿ ಸಕ್ರಮಗೊಳಿಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಯೋಜನಾ ಇಲಾಖೆಯೊಂದಿಗೆ ಸಮಾಲೋಚಿಸಿದ ನಂತರ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ಭರವಸೆಯನ್ನು ಸರ್ಕಾರ ಕೊಟ್ಟು ಇವತ್ತು ಇವರನ್ನು ನಾವು ಖಾಯಂಗೊಳಿಸಲು ಸಾಧ್ಯವಿಲ್ಲ ಎನ್ನುನಂತಹ ಉತ್ತರವನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರ ಭರವಸೆಗೆ, ಸರ್ಕಾರದ ಭರವಸೆಗೆ ಏನಾದರೂ ಮರ್ಯಾದೆ ಅಥವಾ ಗೌರವ ಇದೆಯೋ ಹೇಗೆ? ಒಂದು ಸಲ ಒಂದು ರೀತಿಯ ಭರವಸೆಯನ್ನು ಕೊಡುವುದು, ಮತ್ತೊಂದು ಸಾರಿ ಇಲ್ಲವೆಂದು ಹೇಳುವುದು, ಈ ರೀತಿಯಾಗಿ ಸರ್ಕಾರ ದಿಕ್ಕು ದಿಸೆಯಿಲ್ಲದೆ ಭರವಸೆ ಕೊಟ್ಟಿದೆ. ಆದಕ್ಕಾಗಿ ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟವಾದ ನಿರ್ಧಾರವನ್ನು ಹೇಳಬೇಕು ಮತ್ತು ಅವರನ್ನು ಖಾಯಂಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ಕೃಷ್ಣಪ್ಪ :— ಸನ್ಮಾನ್ಯ ಸಭಾಧ್ಯಕ್ಷರೆ, ಈ ಭರವಸೆ ನೀಡಿರುವ ಹಿನ್ನಲೆಯಲ್ಲಿ ಸೇವೆಯಲ್ಲಿ ಸಕ್ರಮಗೊಳಿಸುವ ಬಗ್ಗೆ ಕಾನೂನು ಇಲಾಖೆ, ಯೋಜನಾ ಇಲಾಖೆ, ಸಿಬ್ಬಂದಿ ಆಡಳಿತ ಸುಧಾರಣಾ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳೊಂದಿಗೆ ಸಮಾಲೋಚಿಸಿದಾಗ 1.7.84ರ ನಂತರ ನಾಮಕಗೊಂಡ ಸಿಬ್ಬಂದಿಯನ್ನು ಸಕ್ರಮಗೊಳಿಸುವ ಬಗ್ಗೆ, ಯಾವುದೇ ನ್ಯಾಯಾಲಯದ ತೀರ್ಪು ಇಲ್ಲದೆ ಇರುವುದರಿಂದ, ಹಾಗೂ ಒಂದು ವೇಳೆ ಈ ಸಿಬ್ಬಂದಿಯನ್ನು ಸೇವೆಯಲ್ಲಿ ಸಕ್ರಮಗೊಳಿಸಿದಲ್ಲಿ, ಇದೇ ರೀತಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ತಾತ್ಕಾಲಿಕ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಹಸ್ರಾರು ನೌಕರರ ಸೇವೆಯನ್ನು ಸಕ್ರಮಗೊಳಿಸುವ ಅನಿವಾರ್ಯತೆ ಎದುರಿಸಬೇಕಾಗುತ್ತದೆ. ಆದರ ಮೇಲೆ ಸರ್ಕಾರ ತನ್ನ ಇತಿ ಮಿತಿ ಹಾಗೂ ಕಾನೂನು ಚೌಕಟ್ಟಿನೊಳಗೆ ಅವರ ಬೇಡಿಕೆಗಳನ್ನು ಪರಿಶೀಲಿಸಿ, ಹಾಗೂ ವ್ಯಕ್ತಿ ಶಿಕ್ಷಣ ಪರಿಸ್ಥಿತಿಯನ್ನು ಮನಗಂಡು ಅವರ ಬಗ್ಗೆ ಸಹಾನುಭೂತಿ ನಿಲುವು ತಳೆದು ಅವರ ಸಂಭಾವನೆಯನ್ನು ದ್ವಿಗುಣಗೊಳಿಸಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ :— ಹಿಂದೆ ಸನ್ಮಾನ್ಯ ಕೃಷ್ಣಪ್ಪನವರು ಉತ್ತರ ಕೊಟ್ಟಾಗ ಭಾರತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ 1.7.95ಕ್ಕೆ ಹಾಗೂ 1.7.96ಕ್ಕೆ ನಿರಂತರ ಸೇವೆ ಸಲ್ಲಿಸಿ ಪೂರ್ಣ ಕಾರ್ಯಭಾರ ನಿರ್ವಹಿಸುತ್ತಿರುವ 97 ಸಿಬ್ಬಂದಿ ವರ್ಗದವರನ್ನು ಹಾಗೂ1.7.98ಕ್ಕೆ ತದನಂತರ ಏಳು ವರ್ಷಗಳ ಸೇವೆ ಸಲ್ಲಿಸಿ, ಕಾರ್ಯ ನಿರ್ವಹಿಸುತ್ತಿರುವ ಅರೇಕಾಲಿಕ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರನ್ನು ಸೇವೆಯಲ್ಲಿ ಸಕ್ರಮಗೋಳಿಸಲಾಗುವುದು ಎಂದು ಅವರು ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಮೇಲೆ ಅವರು ಉತ್ತರ ಕೊಟ್ಟಿದ್ದರು. ಈಗ ಮತ್ತೆ ಬೇರೆ ರೀತಿಯ ಉತ್ತರ ಕೊಡುತ್ತಿದ್ದಾರೆ. ಇದರಲ್ಲಿ ಹಿಂದೆ ಕೊಟ್ಟ ಉತ್ತರ ಸರಿ ಅಥವಾ ಇಂದು ಕೊಡುತ್ತಿರುವ ಉತ್ತರ ಸರಿ ಎಂಬುದನ್ನು ಅವರು ತಿಳಿಸಬೇಕು.

ಶ್ರೀ ಆರ್. ಕೃಷ್ಣಪ್ಪ :— ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ 115 ಜನರಿಗೆ ನಾವು ಪರ್ಮನೆಂಟ್ ಮಾಡಿದ್ದೇವೆ. ತದನಂತರ ಯಾವುದೇ ಆದೇಶ ಇಲ್ಲದೇ ಇದ್ದುದರಿಂದ ಎಲ್ಲಾ ಇಲಾಖೆಯವರಿಗೂ ಕಳುಹಿಸಿದಾಗ ಈ ರೀತಿ ಬಂದಾಗ ಎಲ್ಲಾ ಇಲಾಖೆಯಲ್ಲೂ ಸಾಕಷ್ಟು ಜನ ಇಂತಹ ನೌಕರರು ಇರುವುದರಿಂದ ಅವರನ್ನು ಪರ್ಮನೆಂಟ್ ಮಾಡುವುದರಿಂದ ಸರ್ಕಾರದಜ ಮೇಲೆ ಹೊರೆ ಜಾಸ್ತಿಯಾಗುತ್ತದೆ ಎನ್ನುವ ಭಾವನೆ ಮೇಲೆ ಈ ರೀತಿ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಹಿಂದೆ 1997 ರಲ್ಲಿ ಮತ್ತು 98 ರಲ್ಲಿ ಭರವಸೆ ಕೊಟ್ಟಿದ್ದಾರೆ, ಅವರು ಸತ್ಯಾಗ್ರಹ ಮಾಡಿ, ಚಳುವಳಿ ಮಾಡುತ್ತಿದ್ದಾರೆ. ಹಂತ ಹಂತವಾಗಿ ನಾವು ಮಾಡುತ್ತೇವೆ ಎಂದರೆ ಅಡ್ಡಿ ಇಲ್ಲ.

7439—7

ಅಧ್ಯಕ್ಷರು :— ನಮ್ಮ ಟ್ರೆಜರಿಯಲ್ಲಿರುವ ದುಡ್ಡು 63 ಪರ್ಸೆಂಟ್‌ನಷ್ಟು ಸಂಬಳ ಸಾರಿಗೆಗಾಗಿ ಖರ್ಚಾಗುತ್ತಿದೆ. ಇನ್ನೂ ಯಾರ್ಯಾರಿಗೆ ಕೊಡಬೇಕೆಂದಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್ :— ದುಡಿಯತಕ್ಕಂತಹ ವ್ಯಕ್ತಿಗಳು ಈಗಾಗಲೇ ಅವರು ಸರ್ವೀಸ್‌ನಲ್ಲಿ ಇದ್ದಾರೆ. ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದರೆ ಅಡ್ಡಿ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಸಭಾಧ್ಯಕ್ಷರೆ. ಇದರ ಬಗ್ಗೆ ಈ ಹಿಂದೆಯೂ ಕೂಡ ಚರ್ಚೆಯಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ನಾವು ಯಾವ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇವೆ ಅದಕ್ಕೆ ಅನುಗುಣವಾಗಿ, 1984ನೇ ಇಸವಿಯ ಮೊದಲು 10 ವರ್ಷ ಯಾರನ್ನು ಸಂಪೂರ್ಣವಾಗಿ ಅವರ ಸೇವೆಯನ್ನು ಮುಗಿಸಿದ್ದಾರೆ, ಅವರನ್ನು ರೆಗ್ಯುಲರೈಸ್ ಮಾಡತಕ್ಕಂತಹ ಕಾರ್ಯಕ್ರಮ ಮಾಡಿದ್ದೇವೆ. ಆದರೆ 1997ಕ್ಕೆ ಈ ಕೇಂದ್ರ ಸರ್ಕಾರದ ಯೋಜನೆ ಸಂಪೂರ್ಣಗೊಂಡಿದೆ. ಈಗಾ ಕೇಂದ್ರ ಸರ್ಕಾರದಿಂದ ಯಾವುದೇ ಹಣ ಬರುವುದಿಲ್ಲ. ಆದ್ದರಿಂದ ಸುಪ್ರೀಂ ಕೋರ್ಟ್ ಆಜ್ಞೆ ತೆರವಾದ ಮೇಲೆ ಹಂತ ಹಂತವಾಗಿ ನೇಮಕವಾಗಿರತಕ್ಕಂತಹವರ ಬಗ್ಗೆ ಈಗ ಅವರಿಗೆ ಕೊಡುತ್ತಿರತಕ್ಕಂತಹ ಸ್ಪೈಫಂಡನ್ನು ದ್ವಿಗುಣಮಾಡಿ ಸುಮಾರು 2,000 ರೂ.ವರೆಗೆ ಮಾಡಿದ್ದೇವೆ. ಹಿಂದೆ ಅದನ್ನು ಏನು ಮಾಡಬೇಕು ಎಂದು ಹೇಳತಕ್ಕಂತಹ ದೃಷ್ಟಿಯಲ್ಲಿ ನೀವು ಇದನ್ನು ಖಾಯಂ ಮಾಡಬೇಕೆಂದು ಹೇಳತಕ್ಕಂಥದ್ದು, ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಮತ್ತು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದ ತಾರ್ಪಿನ ಪ್ರಕಾರ ಖಾಯಂ ಮಾಡುವ ಸಂದರ್ಭದಲ್ಲಿ ಈಗಿರತಕ್ಕಂತಹ ನಿಯಮಗಳನ್ನೇ ಅನುಸರಿಸಿ ಮಾಡಬೇಕೆಂದು ಹೇಳತಕ್ಕಂತಹ ಹಿನ್ನಲೆಯಲ್ಲಿ, ಸ್ವಲ್ಪ ಮಟ್ಟಿಗೆ ಇದರಲ್ಲಿ ಕಾನೂನಿನ ಅಂಶ ಇರುವುದರಿಂದ ಇದನ್ನು ನಾವು ತರ್ಚೆ ಮಾಡುತ್ತೇವೆ.

ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಸಕರ ಕೊರತೆ.

162(1092) ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣ ಕೊಡುತ್ತಿರುವ ಆಂಗ್ಲ ಶಾಲೆಗಳು ಕನ್ನಡ ಒಂದಕ್ಷರವನ್ನು ಕಲಿಸದೇ ನರ್ಸರಿ ಎಲ್‌ಕೆಜಿ, ಯುಕೆಜಿಗಳಲ್ಲಿ ಸಂಪೂರ್ಣ ಇಂಗ್ಲೀಷನ್ನು ಮಾತ್ರ ಕಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) 1ನೇ ತರಗತಿಯಿಂದ 4ನೇ ತರಗತಿಯವರೆಗೆ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬ ಕಾನೂನಿನಂತೆ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಖಾಸಗಿ ಸಂಸ್ಥೆಗಳಲ್ಲಿಯು ಸರ್ಕಾರ ತರುವುದೇ;